ಬಂದವಳಂತೆ.

'ಮನುಷ್ಯ ತನ್ನ ಬದುಕು ಮತ್ತು ಉಳಿವಿಗಾಗಿ ಪ್ರಕೃತಿಯೊಂದಿಗೆ ಸದಾ ಸಂಘರ್ಷಕ್ಕಿಳಿಯುತ್ತಾನೆ. ಎಲ್ಲರ ಸಾಧನೆಯ ಹಿಂದೆಯೂ ಸ್ವಾರ್ಥ ಕಾಣದಂತೆ ಆಳದಲ್ಲಿ ಅಂತರ್ಗಾಮಿಯಾಗಿರುತ್ತದೆ. ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಸ್ವಾರ್ಥವಿಲ್ಲದೆ ಮನುಷ್ಯ ಕ್ರಿಯೇಟಿವ್ ಆಗಲಾರ', ನನ್ನ ಬಗ್ಗೆ ಪ್ರಶಂಸಿಸಿದ್ದಕ್ಕೆ ಹೇಳಿದ್ದೆ ನಾನು.

'ಈಗ ಮುವಟ್ಟುಪುಜಗೆ ಹೋಗೋಣ. ಇಲ್ಲಿಂದ ಒಂದೂವರೆ ಗಂಟೆ ಪ್ರಯಾಣ ಅಷ್ಟೆ. ಇವೊತ್ತು ನಮ್ಮ ಮನೆಯಲ್ಲೇ ಹಾಲ್ಟ್. ಕೆ.ಎಮ್. ನಯ್ಯಾರ್ ಅಂಕಲ್ ಕೂಡ ದೆಹಲಿಗೆ ಹೋಗಿದ್ದಾರೆ. ಬರುವುದು ನಾಳೆ ರಾತ್ರಿಗೇನಂತೆ' ಎಂದವಳ ಮಾತುಗಳಿಂದ ಬೇಸರದ ಬದಲು ಖುಷಿಯೇ ಆಗಿತ್ತು. ವಯಸ್ಸಿನ ಅಂತರವಿಲ್ಲದೆ ಇಡೀ ಜೀವಜಗತ್ತಿನ ಎಲ್ಲಾ ಪ್ರಭೇದಗಳಲ್ಲೂ ಪರಿಚಯವೇ ಇಲ್ಲದ ವಿರೋಧಿ ಲಿಂಗದ ದೇಹಗಳು ಬಣ್ಣ, ಭಾಷೆ, ಪ್ರಾದೇಶಿಕತೆಯ ಭೇದಭಾವವಿಲ್ಲದೆ ಸಾವಿರಾರು ವರ್ಷಗಳ ಪರಿಚಯವಿರುವಂತೆ ಒಂದಕ್ಕೊಂದು ಆಕರ್ಷಿಸಲ್ಪಡುವ, ಒಂದಾಗಲು ಬಯಸುವ ಪರಿ ನಿಜಕ್ಕೂ ಸೃಷ್ಟಿಯ ಅತ್ಯಂತ ವಿಸ್ಮಯದ ಸಂಗತಿಯೇ ಸರಿ! ಇದರಿಂದಾಗಿಯೇ ಜೀವ ಜಗತ್ತು ಕ್ರಿಯಾಶೀಲವಾಗಿರುವುದು ಕೂಡ. ಅವಳಿಗಿಂತಲೂ ಹದಿನೈದು ವರ್ಷಗಳು ದೊಡ್ಡವನಿರಬಹುದಾದ ನನ್ನ ಆಂತರ್ಯದಲ್ಲಿ ಅವಳು ನನ್ನನ್ನು ಏಕವಚನದಲ್ಲಿ ಸಂಬೋಧಿಸಲಿ ಎಂಬ ಬಯಕೆ ಕ್ಷಣ ಮಾತ್ರದಲ್ಲಿ ಚಿಗುರೊಡೆದಿದ್ದೂ ಕೂಡ ಪ್ರಕೃತಿಯ ಆ ವಿಸ್ಮಯ ಸಂಗತಿಯ ಕಾರಣದಿಂದಲೇ ಇರಬೇಕು.

ಮನುಷ್ಯನ ದೇಹದಲ್ಲಿ ಅಡಗಿ ದೇಹವನ್ನು ಬುಗುರಿಯಂತೆ ಆಡಿಸುವ ಮನಸ್ಸು, ಆತ್ಮ ಎಲ್ಲವೂ ಎಂಥ ವ್ಯಾಖ್ಯಾನಿಸಲಾರದ ಅಗೋಚರ ಸಂಗತಿಗಳು! ತರ್ಕಶಾಸ್ತ್ರ ಮತ್ತು ಮನಃಶಾಸ್ತ್ರಗಳು ಅದೇತಕ್ಕೋ ನನ್ನನ್ನು ಬಲವಾಗಿ ಆಕರ್ಷಿಸಿ, ಅವುಗಳ ಬಗ್ಗೆ ಅಪಾರವಾದ ಆಸಕ್ತಿಯಿಂದ ಅಧ್ಯಯನ ಮಾಡಿರುವ ನನಗೆ ಬದುಕಿನಲ್ಲಿ ಘಟಿಸುವ ಅನೇಕ ಸಂಗತಿಗಳ ಬಗ್ಗೆ ಇದ್ದಕ್ಕಿದ್ದಂತೆ ಗೊಂದಲಗಳು ಮೂಡುವುದು ಮತ್ತು ಅಷ್ಟೇ ವೇಗದಲ್ಲಿ ಅಂಥ ಗೊಂದಲಗಳಿಗೆ ಉತ್ತರ ದೊರೆತು ನಿರಾಳವಾಗುವುದು ಒಂದು ರೀತಿಯ ವಿಸ್ಮಯದ ಪ್ರಶ್ನೆಯಾಗಿ ಕಾಡುತ್ತಿರುವುದೊಂದು ಹುಡುಕಾಟದ ಮತ್ತು ಹುಡುಗಾಟದ ವಿಷಯಗಳಂತೆ ಪದೇ ಪದೇ ಅನಾವರಣಗೊಳ್ಳುತ್ತಿರುವುದು ನನ್ನಲ್ಲಿ ಚಲನಶೀಲತೆಯನ್ನು ಜೀವಂತವಾಗಿಟ್ಟಿರುವಂತೆ ಮತ್ತು ಅಂಥ ಜೀವಂತಿಕೆ ಸಣ್ಣ ವಿಷಯಕ್ಕೂ ನನ್ನನ್ನು ಸ್ಪಂದಿಸಲು ಅನುವು ಮಾಡಿಕೊಡುತ್ತಿರುವಂತೆ ಭಾಸವಾಗುತ್ತದೆ!

ಕಾರು ಮೈನ್ ರೋಡ್ ತಲುಪಲು ಏರ್‌ಪೋರ್ಟ್ ರಸ್ತೆಯಲ್ಲಿ ಹಿಮ್ಮುಖವಾಗಿ ಸಾಗುತ್ತಿರುವಾಗ ವಿಶಾಲ ಬಯಲಿನ ತುಂಬಾ ಸೌರಶಕ್ತಿಯ ಫಲಕಗಳು ಸೂರ್ಯನ ಕಿರಣಗಳೊಂದಿಗೆ ಅನುಸಂಧಾನಗೊಂಡು ಝಗಮಗಿಸುತ್ತಾ ಪ್ರತಿಫಲನಗೊಳ್ಳುತ್ತಿದ್ದವು. ಅಷ್ಟು ದೊಡ್ಡ ಮಟ್ಟದ ಸೋಲಾರ್ ಫಲಕಗಳನ್ನು ಒಂದೇ ಕಡೆ ಅಳವಡಿಸಿದ್ದನ್ನು ಇದುವರೆಗೂ ನಾನೆಲ್ಲಿಯೂ ನೋಡಿರಲಿಲ್ಲ, ಅದೂ ವಿಮಾನ ನಿಲ್ದಾಣದ ಪ್ರದೇಶದಲ್ಲಿ. ಅವುಗಳ ಜೊತೆಯಲ್ಲಿಯೇ ಹಚ್ಚ ಹಸುರಿನ ವಿವಿಧ ತರಕಾರಿ ತೋಟಗಳು. ಏಳೆಂಟು ವರ್ಷಗಳ ಹಿಂದೆ ನಾನು ಕೊಚ್ಚಿನ್‌ಗೆ ಬಂದಿದ್ದಾಗ ಈ ಜಾಗವೆಲ್ಲ ಸಾದಾ ಬಯಲಾಗಿತ್ತು.

'ಇಡೀ ಪ್ರಪಂಚದಲ್ಲಿ ನಮ್ಮ ಏರ್‌ಪೋರ್ಟ್ ಸಂಪೂರ್ಣವಾಗಿ ಸೋಲಾರ್ ಶಕ್ತಿಯಿಂದಲೇ ನಡೆಯುತ್ತಿರುವ ಮೊದಲ ಏರ್‌ಪೋರ್ಟ್ ಎಂಬ ಹೆಗ್ಗಳಿಕೆ ಗಳಿಸಿದೆ. ಹೋದ ವರ್ಷ 'ಚಾಂಪಿಯನ್ ಆಫ್ ಅರ್ಥ' ಎಂಬ ಇಂಟರ್ ನ್ಯಾಷನಲ್ ಅವಾರ್ಡ್ ಕೂಡ ದಕ್ಕಿಸಿಕೊಂಡಿದೆ. ನಮ್ಮ ಏರ್‌ಪೋರ್ಟ್ ನಮ್ಮ ಹೆಮ್ಮೆ...' ನನ್ನ ಕುತೂಹಲವನ್ನು ತಣಿಸಿದ್ದಳು ಅರುಂಧತಿ.

'ತುಂಬಾ ಇಂಟರೆಸ್ಟಿಂಗ್ ಅಂಡ್ ಇನ್ನೊವೇಟಿವ್ ಆಗಿದೆ. ಸೂರ್ಯ ಇಲ್ಲದಿದ್ದ ಪಕ್ಷದಲ್ಲಿ ಈ ಭೂಮಿಯ ಅಸ್ತಿತ್ವ ಕೂಡ ಇರುತ್ತಿರಲಿಲ್ಲವೇನೋ' ಎಂದು ಸೌರ ಫಲಕಗಳನ್ನು ಕಣ್ಣು ತುಂಬಿಸಿಕೊಳ್ಳುತ್ತಲೇ ಹೇಳಿದೆ.

'ನಲವತ್ತೈದು ಎಕರೆಗಳಲ್ಲಿ ನಲವತ್ತಾರು ಸಾವಿರದ ನೂರೈವತ್ತು ಸೌರಶಕ್ತಿ ಫಲಕಗಳನ್ನು ಅಳವಡಿಸಲಾಗಿದೆ. ಪ್ರತಿದಿನ ಐವತ್ತು ಸಾವಿರದಿಂದ ಅರವತ್ತು ಸಾವಿರ ಯೂನಿಟ್ ಸೌರವಿದ್ಯುತ್ ಶಕ್ತಿಯನ್ನು ಉತ್ಪಾದನೆ ಮಾಡಲಾಗುತ್ತಿದೆ. ಸೋಲಾರ್ ಫಲಕಗಳ ಮಧ್ಯೆ ಆರ್ಗ್ಯಾನಿಕ್ ತರಕಾರಿಗಳನ್ನು ಬೆಳೆಸುತ್ತಾರೆ. ಕಳೆದ ವರ್ಷ ಅರವತ್ತು ಟನ್ ತರಕಾರಿಯನ್ನು ಬೆಳೆದಿದ್ದಾರೆ' ಎಂದು ಸೌರಶಕ್ತಿ ಯೋಜನೆಯ ಸಂಪೂರ್ಣ ವಿವರ ನೀಡಿದ್ದಳು. ಕಾರು ಮುಖ್ಯ ರಸ್ತೆಯಲ್ಲಿ ಸಾಗುತ್ತಿತ್ತು. ಇಕ್ಕೆಲಗಳಲ್ಲಿ ಭೂಮಿ ಹಸಿರು ಹೊದ್ದು ಮಲಗಿರುವಂತೆ ಕಾಣುತ್ತಿತ್ತು.

'ಈ ಸೋಲಾರ್ ಪ್ರಾಜೆಕ್ಟ್ ಕಾಂಟ್ರ್ಯಾಕ್ಟ್ ನಮಗೇ ಸಿಕ್ಕಿತ್ತು. ಅಪ್ಪ ನಿಗದಿತ ಸಮಯಕ್ಕಿಂತ ಎರಡು ತಿಂಗಳು ಮುಂಚೆಯೇ ಪ್ರಾಜೆಕ್ಟ್ ಕಂಪ್ಲೀಟ್ ಮಾಡಿಕೊಟ್ಟಿದ್ದರು. ಇನ್ನು ವರ್ಕ್ ಕ್ವಾಲಿಟಿಯಲ್ಲಿ ಅಪ್ಪ ಒಂದಿಷ್ಟೂ ಕಾಂಪ್ರೊಮೈಸ್ ಮಾಡಿಕೊಂಡೋರಲ್ಲ.



## ಕೇಶವರೆಡ್ಡಿ ಹಂದ್ರಾಳ

ಗ್ರಾಮೀಣ ಬದುಕಿನ ಎಂದೂ ಮುಗಿಯದ ಕಥೆಗಳನ್ನು ಮೊಗೆ ಮೊಗೆದು ಓದುಗರ ಮುಂದಿಡುತ್ತಿರುವ ಕೇಶವರೆಡ್ಡಿ ಹಂದ್ರಾಳ ಕನ್ನಡದ ಪ್ರಮುಖ ಕಥೆಗಾರರಲ್ಲೊಬ್ಬರು. ತುಮಕೂರು ಜಿಲ್ಲೆ ಹಂದ್ರಾಳದ ಅವರು, ಕೆ.ಎ.ಎಸ್ ಅಧಿಕಾರಿಯಾಗಿ ವಾಣಿಜ್ಯ ತೆರಿಗೆ ಇಲಾಖೆಯ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ. ಗ್ರಾಮ ಭಾರತವನ್ನು, ಅದರಲ್ಲೂ ದೀನದಲಿತರ ಕೇರಿಗಳ, ಒಕ್ಕಲುಕೇರಿಯ ಕಥೆಗಳನ್ನು ಹಂದ್ರಾಳರಷ್ಟು ಆಸ್ಥೆಯಿಂದ ವ್ಯಾಪಕವಾಗಿ ಚಿತ್ರಿಸಿದ ಕಥೆಗಾರರು ವಿರಳ. ಮಧುಗಿರಿ ಸೀಮೆಯ ಒಕ್ಕಲು ಜನರ ಭಾಷೆ ಹಂದ್ರಾಳರ ಕಥೆಗಳಲ್ಲಿ ಹೊಸ ಹೊಳಪು ಪಡೆದುಕೊಂಡಿದೆ. ಆಡುಮಾತು ಕೃತಕ ಎನ್ನಿಸದಂತೆ, ಸಂವಹನಕ್ಕೆ ಕಷ್ಟ ಎನ್ನಿಸದಂತೆ ಬಳಸುವ ಕಸುಬುದಾರಿಕೆ ಅವರದು. 'ಮರೆತ ಭಾರತ' ಹಾಗೂ 'ಒಕ್ಕಲ ನೆನಪು' ಹಂದ್ರಾಳರ ಮಹತ್ವದ ಕೃತಿಗಳು. ಕುರಿಗಾಹಿಗಳ ಅಲೆಮಾರಿತನ, ಸೋಬಾನೆ ಹಾಡುಗಳ ಸೊಗಸು, ಕಾರ್ಮಿಕ ಹೆಣ್ಣುಮಕ್ಕಳ ಅಂತರಂಗದ ಚೆಲುವು, ನಾಟಿ ಮಾಡುವ ಸಂದರ್ಭದ ಪದಗಳು, ಆಲೆಮನೆ, ಸೂಲಗಿತ್ತಿ, ಬಡಗಿ, ನೀರಗಂಟಿ, ಬಣಜಿಗ, ಮುಸಲ್ಮಾನರು, ಕ್ಷೌರಿಕ, ಅಗಸ, ದಾಸಯ್ಯ, ಪೂಜಾರಿ, ಆಚಾರಿ, ಮುಂತಾದ ಹಳ್ಳಿಯ ಈ ಚಿತ್ರಗಳೆಲ್ಲ ಹಂದ್ರಾಳರ ಮೂಲಕ ಕನ್ನಡ ಸಾಹಿತ್ಯ ಸಂಪುಟಗಳಲ್ಲಿ ಮತ್ತೆ ಮತ್ತೆ ಜೀವಪಡೆದಿವೆ. 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ', 'ಬರದ ನಾಡಿನಲ್ಲಿ ಬೆಳದಿಂಗಳು' ಅವರ ಕೆಲವು ಜನಪ್ರಿಯ ಕಥಾಸಂಕಲನಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ಸೇರಿದಂತೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಹಂದ್ರಾಳರ ಸಾಹಿತ್ಯ ಸಾಧನೆಗೆ ಸಂದಿವೆ.

'ಮೃಗತೃಷ್ಣ' ಮೂಲಕ ಹಂದ್ರಾಳರು ಕಥೆಗಳ ಮೊಗಸಾಲೆಯಿಂದ ಕಾದಂಬರಿಯ ರಥಬೀದಿಗೆ ಬಂದಿದ್ದಾರೆ. 'ಹೊಸ ಪಯಣಕ್ಕೆ ಜೊತೆಯಾಗಿ' ಎಂದು 'ಸುಧಾ' ಓದುಗರನ್ನೂ ಆಹ್ವಾನಿಸಿದ್ದಾರೆ.